**ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ವಾದಿ ಪರವಾಗಿ ಶ್ರೀ ಬಿ.ಎಸ್. ವಕೀಲರಿಂದಃ-</u>**

ನಾನು ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು, ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

ಈ ದಾವೆಗೆ ಪೂರಕವಾಗಿ ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳಲ್ಲಿರುವ ದಿನಾಂಕಃ 03-05-1999 ರ ಮಾರಾಟ ಪತ್ರ ದೃಢೀಕೃತ ನಕಲುನ್ನು ನಿಪಿ-1 ಎಂದು, ಮುಟೇಷನ ರಿಜಿಸ್ಟರ ಪ್ರತಿಯನ್ನು ನಿಪಿ-2 ಎಂದು, ಸರ್ವೆ ನಂ. 189 ರ 35 ಪುಟಗಳಲ್ಲಿರುವ ಪಹಣಿ ಪತ್ರಿಕೆಯನ್ನು ನಿಪಿ-3 ಎಂದು, ಪಿಂಚಣಿ ಪುಸ್ತಕವನ್ನು ನಿಪಿ-4 ಎಂದು, ನಿಪಿ-4 ರಲ್ಲಿರುವ ನನ್ನ ತಂದೆಯ ಸಹಿಗಳನ್ನು ನಿಪಿ-4(ಎ) ದಿಂದ ನಿಪಿ-4(ಸಿ) ಎಂದು ಮತ್ತು ದಿನಾಂಕಃ 15-11-1995 ರ ಪತ್ರವನ್ನು ನಿಪಿ-5 ಎಂದು ಗುರುತಿಸಲಾಯಿತು.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ನಾನು ಹಾಜರುಪಡಿಸಿದ ದಾಖಲೆಗಳನ್ನು ಪರಿಗಣಿಸಿ ಸದರಿ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ..

**<u>ಪಾಟೀ ಸವಾಲು ಪ್ರತಿವಾದಿ ಪರವಾಗಿ ಶ್ರೀ ಎಸ್.ಜಿ.ಜೆ. ವಕೀಲರು ಸಮಯ ಕೋರಿದರಿಂದ ಸಮಯ ನೀಡಲಾಯಿತು.</u>**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**